ಹೋಟೆಲ್ ತಿಂಡಿ ತಿನಿಸುಗಳ ದರ ಏರಿಕೆ ಬಗ್ಗೆ.

೪೮೨. ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಆಹಾರ ಮಂತ್ರಿ ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಲ್ಲಾ ನಗರಗಳಲ್ಲಿ ಮತ್ತು ಮುಖ್ಯವಾಗಿ ಬೆಂಗಳೂರಿನಲ್ಲಿ ಹೋಟೆಲ್ ತಿಂಡಿ ತಿನಿಸುಗಳ ದರಗಳನ್ನು ಏರಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದನ್ನು ಕಡಿಮೆ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ಸರ್ಕಾರದ ವತಿಯಿಂದ ಈ ಬಗ್ಗೆ ಸಮಿತಿಯೊಂದನ್ನು ರಚಿಸಲಾಗಿದ್ದು ದರ ಇಳಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ನಗರದಲ್ಲಿನ ವೈನ್ ಸ್ಟೋರ್‌ಗಳು ಮತ್ತು ಅಂಗಡಿಗಳ ಬಗ್ಗೆ.

೪೮೯. ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ರಾಜ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿ ೧೯೮೪ ರಿಂದ ೧೯೮೭ ರವರೆಗೆ ವೈನ್ ಸ್ಟೋರುಗಳನ್ನು ತೆಗೆಯಲು ಎಷ್ಟು ಪರವಾನಿಗೆಗಳನ್ನು ಕೊಡಲಾಗಿದೆ ?

ಆ) ಈ ವೈನ್ ಸ್ಟೋರಂಗಳಿಗೆ ಪರವಾನಗಿ ಕೊಡಲು ಎಷ್ಟು ಹಣ ಪ್ರತಿಯೊಬ್ಬರಿಂದ ವಸೂಲಿ ಮಾಡಲಾಗುತ್ತದೆ ?

ಇ) ಈ ವೈನ್ ಸ್ಟೋರ್‌ಗಳನ್ನು ಯಾವ ಜಾಗದಲ್ಲಿ ಯಾವ ವೇಳೆಗಳಲ್ಲಿ ತೆರೆಯಂಬೇಕೆಂಬ ನೀತಿ ನಿಯಮಗಳಿವೆಯೆ ? ಹಾಗಿದ್ದಲ್ಲಿ ಅವುಗಳ ವಿವರ ನೀಡುವುದು,

ಈ) ಶಾಲೆಗಳು, ಗುಡಿಸಲುಗಳು, ದೇವಸ್ಥಾನ ಇತ್ಯಾದಿಗಳ ಪಕ್ಕದಲ್ಲಿ ಬೆಂಗಳೂರಿನಲ್ಲಿ ವೈನ್ ಸ್ಟೋರಂಗಳಿರುವುದಂ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಉ) ಇಂತಹ ವೈನ್ ಸ್ಟೋರ್‌ಗಳ ಪರವಾನಿಗೆಗಳನ್ನು ರದ್ದು ಮಾಡಲು ಸರ್ಕಾರದವರು ಕ್ರಮ ಕೈಗೊಂಡಿರುವರೆ ?

ಊ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ? ಹಾಗೂ ೧೯೮೪ ರಿಂದ ಇಲ್ಲಿಯವರೆಗೆ ಪರವಾನಿಗೆ ರದ್ದಾಗಿರುವ ವೈನ್ ಸ್ಟೋರ್‌ಗಳ ಸಂಖ್ಯೆ ಎಷ್ಟು ?

ಶ್ರೀ ಡಿ.ಬಿ. ಇನಾಂದಾರ್ (ಅಬಕಾರಿ ಮಂತ್ರಿಗಳು).—

ಅ) ೧೯೮೪-೮೫ — ೬೭
೧೯೮೫-೮೬ — ೬೭
೧೯೮೬-೮೭ — ೬೭

ಆ) ರೂ. ೫೦,೦೦೦-೦೦ ಪ್ರತಿ ಪರವಾನಿಗೆಗೆ
(೧೯೮೭-೮೮ ರಿಂದ)

ಇ) ರೈಲ್ವೆಸ್ಟೇಷನ್, ರೈಲ್ವೆ ವರ್ಕ್ಸ್ ಪ್ರಾಥಮಿಕ ಪ್ರಾಥಶಾಲೆಗಳು, ಪೂಜಾ ಮಂದಿರಗಳು ಹರಿಜನ ಕಾಲೋನಿ, ಕೂಲಿ ನೌಕರರು ವಾಸಿಸುವ ಸ್ಥಳ, ರಾಷ್ಟ್ರೀಯ ಹೆದ್ದಾರಿಗಳು ಇವುಗಳಿಂದ ದೂರವಿರುವ ಸ್ಥಳಗಳಲ್ಲಿ ತೆಗೆಯಬೇಕೆಂಬ ನಿಯಮವಿದೆ.

ಈ) ಸರ್ಕಾರದ ಕಾರ್ಯ ನೀತಿಯ ಪ್ರಕಾರ ಮಧ್ಯದ ಅಂಗಡಿಗಳಿಗೆ ೨೦೦ ಮೀಟರ್ ಸುತ್ತಳತೆಯ ಪರಧಿಯಲ್ಲಿ ಸ್ಥಾನಗಳು ಪ್ರಾಥಶಾಲೆಗಳು ಮತ್ತು ಹರಿಜನ ಕೇರಿಗಳು ಇಲ್ಲದಿರುವು